

# ಭಕ್ತೆಗಾಗಿ ಲೇಖನಿ ಹಿಡಿದ ಭಗವಂತ




ಕಥೆ: ಸ್ವಾಮಿ ವಿಮೂರ್ತಾನಂದ

ಚಿತ್ರ : ಶಂಕರ್

**1** ಜನಾಬಾಯಿ ಪಂಡರಾಪುರದಲ್ಲಿ ಸಂತ ನಾಮದೇವನ ಮನೆಯಲ್ಲಿ ಕೆಲಸ ಮಾಡುತ್ತಿದ್ದಳು. ಯಾವಾಗಲೂ ಆ ಮನೆಯಲ್ಲಿ ಪಾಂಡುರಂಗನ ಮಹಿಮೆಯನ್ನು ಸ್ತುತಿ ಮಾಡುತ್ತಿದ್ದರು. ಜನಾಬಾಯಿ ಪಾಂಡುರಂಗನ ಹಾಗೂ ಅವನ ಭಕ್ತರ ಸೇವೆಯನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತಿದ್ದಳು.


**2** ಪಾಂಡುರಂಗನ ದೇವಾಲಯದಲ್ಲಿ ಕೀರ್ತನಕಾರರು ರಾತ್ರಿಯೆಲ್ಲ ಭಗವನ್ನಾಮ ಸಂಕೀರ್ತನೆ, ನರ್ತನಗಳಲ್ಲಿ ಕಾಲಕಳೆಯುತ್ತಿದ್ದರು. ಜನಾಬಾಯಿ ಅವರೊಂದಿಗೆ ತಾನೂ ಸೇರಿಕೊಳ್ಳುತ್ತಿದ್ದಳು.


**3** ಒಂದು ದಿನ ರಾತ್ರಿ, ಜನಾಬಾಯಿ ಕೀರ್ತನಾಕಾರರಿಗೆ ಊಟ ಕೊಂಡೊಯ್ಯಲು ಮನೆಗೆ ಬಂದಳು. ಅವಳು ಅಲ್ಲಿ ಇಲ್ಲದಿದ್ದ ವೇಳೆಯಲ್ಲಿ ಪಕ್ಕದ ಮನೆಯವಳು ಜನಾಬಾಯಿ ಇಟ್ಟಿದ್ದ ಬೆರಣಿಯನ್ನೆಲ್ಲ ಕೊಂಡೊಯ್ದಿದ್ದಳು.





**4** ಜಗಳ ಜೋರಾಯಿತು. ಸಾಮಾನ್ಯವಾಗಿ ಮೃದು ಸ್ವಭಾವದವಳಾಗಿದ್ದ ಜನಾಬಾಯಿ ಜೋರಾಗಿ ಜಗಳವಾಡುವುದನ್ನು ಕಂಡ ನಾಮದೇವನಿಗೆ ಆಶ್ಚರ್ಯವಾಯಿತು.




5
ನಿನ್ನ ಬೆರಣಿಯನ್ನು ನಾನು ತೆಗೆದಿಲ್ಲ.
ಜನಾ, ನೀನೇನು ಹೇಳುತ್ತಿದ್ದೀಯೆ? ಅ ಬೆರಣಿಗಳು ನಿನ್ನವು ಎಂದು ಹೇಗೆ ನೀನು ಸಾಬೀತುಪಡಿಸಬಲ್ಲೆ?
ಇಲ್ಲ. ಆ ಬೆರಣಿಗಳನ್ನು ನೀನೇ ತೆಗೆದಿರಬೇಕು. ನಾನು ಅದನ್ನು ಸಾಬೀತು ಮಾಡಬಲ್ಲೆ.
ಸ್ವಾಮಿ, ನನಗೆ ಸಾಧ್ಯ.


6
ಪಕ್ಕದ ಮನೆಯಲ್ಲಿದ್ದ ಎಲ್ಲ ಬೆರಣಿಗಳನ್ನು ನಾಮದೇವನ ಮನೆಗೆ ತಂದು ಹಾಕಿದರು.
ಓ ಪಾಂಡುರಂಗ! ಕರುಣಾಳು! ನಾನು ನಿನ್ನ ಭಕ್ತರ ಸೇವೆ ಮಾಡುವಾಗ, ಅವರ ಬಟ್ಟೆ ತೊಳೆಯುವಾಗ, ಬೆರಣಿ ತಟ್ಟುವಾಗ ನಾನು 'ವಿಠಲ, ವಿಠಲ' ಎಂದು ನಿನ್ನ ನಾಮಸ್ಮರಣೆ ಮಾಡುತ್ತಿದ್ದುದು ನಿಜವೇ ಆಗಿದ್ದರೆ, ನೀನು ಈಗ ಇದನ್ನು ಸಾಬೀತು ಪಡಿಸಬೇಕು.


7
ಆ ಬೆರಣಿಗಳನ್ನು ಜನಾಬಾಯಿ ಒಂದೊಂದಾಗಿ ನೆಲಕ್ಕೆ ಹಾಕಿದಳು. ಜಾನಾಬಾಯಿ ತಯಾರಿಸಿದ ಬೆರಣಿಗಳು ಬೀಳುತ್ತಿದ್ದಂತೆಯೇ, 'ವಿಠಲ' 'ವಿಠಲ' ಎಂದು ಸದ್ದು ಮಾಡಿದವು. ಉಳಿದವು ಮಾತ್ರ ದಪ್ಪನೆ ಸದ್ದು ಮಾಡುತ್ತ ಬಿದ್ದವು.
ವಿಠಲ...
ವಿಠಲ....




**9** ಜನಾಬಾಯಿ ಯಾವಾಗಲೂ ಭಗವಂತನ ಹಾಗೂ ಅವನ ಭಕ್ತರ ಸೇವೆ ಮಾಡುವುದರಲ್ಲೇ ಕಾಲ ಕಳೆಯುತ್ತಿದ್ದಳು. ಆಗಾಗ ಅವಳು ಗೋಪೀಭಾವದಲ್ಲಿ ಮೈಮರೆತುಬಿಡುತ್ತಿದ್ದಳು. ಪಾಂಡುರಂಗನನ್ನು ಕುರಿತು ಅಭಂಗಗಳನ್ನು ರಚಿಸಿ ಹಾಡುತ್ತಿದ್ದಳು.




**10** ಒಂದು ದಿನ ರಾತ್ರಿ ಪಂಡರಾಪುರ ದೇವಾಲಯದಲ್ಲಿ ಪಾಂಡುರಂಗನು ಏನನ್ನೋ ಬರೆಯುತ್ತಿದ್ದ. ಆ ಕ್ಷಣದಲ್ಲಿ ಅಲ್ಲಿಗೆ ಸಂತ ಜ್ಞಾನೇಶ್ವರರು ಬಂದರು. ಅವರು ಪಾಂಡುರಂಗನೊಂದಿಗೆ ಮಾತುಕತೆ ನಡೆಸಲು ಬಂದಿದ್ದರು.

**11** ಜ್ಞಾನೇಶ್ವರನನ್ನು ನೋಡಿದ ಕೂಡಲೇ ಪಾಂಡುರಂಗನು ತಾನು ಬರೆಯುತ್ತಿದ್ದ ಲೇಖನಿ ಮತ್ತು ತಾಳೆಯ ಗರಿಯನ್ನು ಅಡಗಿಸಿಕೊಂಡ. ಅದನ್ನು ಜ್ಞಾನೇಶ್ವರನು ಗಮನಿಸಿದ. ಭಗವಂತನಿಗೆ ತನ್ನ ಮೇಲೆ ನಂಬಿಕೆ ಹೊರಟುಹೋಯಿತೇ ಎಂದು ಅವನಿಗೆ ಸಂದೇಹವುಂಟಾಯಿತು.


**12**




**13**




**14**




**15**



ಸಚ್ಚಿದಾನಂದ ಸ್ವರೂಪನಾದ ಭಗವಂತನನ್ನು ಕಟ್ಟಿಹಾಕುವ ಹಗ್ಗವೇ ಭಕ್ತಿ. ಅದು ಭಕ್ತನ ಕೈಯಲ್ಲಿದೆ. ಆದ್ದರಿಂದಲೇ ಭಗವಂತನನ್ನು ಭಕ್ತನು ತನ್ನ ಕೈಯಿಂದ ಹಿಡಿದಿಟ್ಟಿದ್ದಾನೆ ಎನ್ನುತ್ತಾರೆ. ಅವನು ಕರೆದಾಗಲೆಲ್ಲ ಭಗವಂತ ಬರುತ್ತಾನೆ.

— ಶ್ರೀರಾಮಕೃಷ್ಣರು